<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 14.08.2026</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

7. ನಾನು 2021-22ರ ಸಾಲಿನ ನನ್ನ ಬ್ಯಾಂಕ್ ಖಾತೆ ವಹಿ ಪಟ್ಟಿ ಹಾಜರುಮಾಡಿಲ್ಲ. ಅದನ್ನು ಹಾಜರುಮಾಡಲು ತೊಂದರೆ ಇಲ್ಲ. 2021-22ರ ಸಾಲಿನಲ್ಲಿ ನನ್ನ ಖಾತೆಯಲ್ಲಿ ಎಷ್ಟು ಮೊತ್ತ ಹಣ ಇತ್ತು ಹೇಳಲು ಆಗುವುದಿಲ್ಲ. ನಾನು ಆರೋಪಿಗೆ ಹಣ ನೀಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ ಮತ್ತು ನನ್ನ ಖಾತೆಯಲ್ಲಿ ಮೇಲೆ ಹೇಳಿದ ಸಾಲಿನಲ್ಲಿ ಸಾಕಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ 5 ದ್ವಿಚಕ್ರ ವಾಹನಗಳು ಇರುತ್ತವೆ. ಕಾರು ಇರುವುದಿಲ್ಲ. ದ್ವಿಚಕ್ರ ವಾಹನಗಳನ್ನು ನಾನು ಖರೀದಿ ಮಾಡಿ ಇಟ್ಟುಕೊಂಡಿದ್ದೇನೆ, ಅದಕ್ಕೆ ಯಾವುದೇ ಸಾಲ ಇರುವುದಿಲ್ಲ. ಆ ದ್ವಿಚಕ್ರ ವಾಹನಗಳ ಖರ್ಚು ತಿಂಗಳಿಗೆ 7-8 ಸಾವಿರ ಆಗುತ್ತದೆ. ನಮ್ಮ ಮನೆಯಲ್ಲಿ ಮೊಬೈಲ್ ಮತ್ತು ಮನೆಯ ಸದಸ್ಯರ ಖರ್ಚು 15-20 ಸಾವಿರ ತಿಂಗಳಿಗೆ ಆಗುತ್ತದೆ.

8. ಹೊಸಪೇಟೆಯ ಮೋಹನ್ ಬಿನ್ ಚಿಕ್ಕ ಮುನಿಯಪ್ಪ ಎಂಬುವವರು ನನಗೆ ಪರಿಚಯ ಇಲ್ಲ. ಅವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಅವರು ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ಆರೋಪಿಗೆ ಯಾವುದೇ ಹಣದ ವ್ಯವಹಾರವಾಗಿಲ್ಲ ಮತ್ತು ಆತ ನನಗೆ ಯಾವುದೇ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಮಾರು ವರ್ಷಗಳ ಹಿಂದೆ ಆರೋಪಿಯು ಮೇಲೆ ಹೇಳಿದ ಮೋಹನ್ ಎಂಬುವವರಿಗೆ 3 ಚೆಕ್ಕುಗಳನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ, ಆ ಮೋಹನ್ ರವರು ನನ್ನ ಮೂಲಕ ಈ ಚೆಕ್ ಪ್ರಕರಣವನ್ನು ಹಾಕಿಸಿದ್ದಾರೆ

ಎಂದರೆ ಗೊತ್ತಿಲ್ಲ. ಮೋಹನ್ ರವರಿಗೆ ಆರೋಪಿ ಹಣವನ್ನು ವಾಪಸ್ಸು ಕೊಟ್ಟಿದ್ದರು ಸಹ ಆತ ಆರೋಪಿಗೆ ತೊಂದರೆ ನೀಡಲು ಈ ಪ್ರಕರಣ ನನ್ನ ಮೂಲಕ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.